ಪಿ.ಡಬ್ಲೂ: 7

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ

ಸಿಸಿ ನಂ 143/16

ಸಿ ಡಬ್ಲೂ 9 ಪಿಡಬ್ಲ್ಯೂ: 7

| | |
|---|---|
| ಸಾಕ್ಷಿದಾರನ ಹೆಸರು | **ಸಿದ್ದಾರ್ಥ** |
| ತಂದೆ ಹೆಸರು | ಶಿವಶಂಕರ್ |
| ವಯಸ್ಸು | 32 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ದೊಡ್ಡಬಳ್ಳಾಪುರ |

ಈ ದಿನ ದಿನಾಂಕ:-06.01.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ರವರಿಂದ

ದಿನಾಂಕ 07-04-2015 ರಂದು ರಾತ್ರಿ ನನ್ನ ಮಲುಗುವ ಕೋಣೆಯಲ್ಲಿ ನನ್ನ ಒಂದು ಲ್ಯಾಪ್‌ಟ್ಯಾಪ್, ಒಂದು ಮೊಬೈಲ್, ಐ ಪ್ಯಾಡ್‌ನ್ನು ಕಿಟ್ಟಿಗಿ ಪಕ್ಕ ಇಟ್ಟಿದೆ ಮರು ದಿನಾಂಕ 08-04-2015 ಬೆಳಿಗ್ಗೆ 6-30 ರಿಂದ 7-30 ಸಮಯದಲ್ಲಿ ಎದ್ದು ನೋಡಿಲಾಗಿ ಲ್ಯಾಪ್‌ಟ್ಯಾಪ್, ಒಂದು ಮೊಬೈಲ್, ಐ ಪ್ಯಾಡ್ ಇರಲಿಲ್ಲ, ಈ ವಿಚಾರವಾಗಿ ನನ್ನ ತಾಯಿ ಬಳಿ ತಿಳಿಸಿರುತ್ತೇನೆ. ಈ ಸಂಬಂಧವಾಗಿ ಚಾಸ-1 ರವರು ದೂರನ್ನು ದಾಖಲಿಸಿರುತ್ತಾರೆ. ನಂತರ 2015 ರ 9ನೇ ತಿಂಗಳನಲ್ಲಿ ಪೋಲಿಸ್ ಠಾಣೆಯಿಂದ ನಮಗೆ ಲ್ಯಾಪ್‌ಟ್ಯಾಪ್ ಮತ್ತು ಐ ಪ್ಯಾಡ್ ಸಿಕ್ಕಿರುವ ಬಗ್ಗೆ ಮಾಹಿತಿ ನೀಡಿದ್ದು, ಅದರಂತೆ ನಾನು ಮತ್ತು ಚಾಸ-1 ರವರು ಠಾಣೆಗೆ ಹೋಗಿ ನೋಡಲಾಗಿ ನನ್ನ ಲ್ಯಾಪ್‌ಟ್ಯಾಪ್ ಮತ್ತು ಐ ಪ್ಯಾಡ್‌ನ್ನು ನೋಡಿ ಗುರುತಿಸಿದ್ದು, ಪೋಲಿಸರು ನನ್ನ ಲ್ಯಾಪ್‌ಟ್ಯಾಪ್‌ನ್ನು ಕಳ್ಳತನ ಮಾಡಿದ್ದ ಕಳ್ಳನನ್ನು ಕೂಡ ತೋರಿಸಿರುತ್ತಾರೆ. ಆರೋಪಿಯನ್ನು ನಾನು ನೋಡಿದರೆ ಗುರುತಿಸಲು ಆಗುವುದಿಲ್ಲ, ನನ್ನ ಕಳವು ಆಗಿದ್ದ ಲ್ಯಾಪ್‌ಟ್ಯಾಪ್, ಒಂದು ಮೊಬೈಲ್, ಐ ಪ್ಯಾಡ್ ನೋಡಿದರೆ ಗುರುತಿಸಬಲ್ಲೇ ಸಾಕ್ಷಿ ನಿಪಿ-2 ಮತ್ತು ನಿಪಿ-3 ರಲ್ಲಿರುವ ಲ್ಯಾಪ್‌ಟ್ಯಾಪ್ ಮತ್ತು ಐ ಪ್ಯಾಡ್‌ನ್ನು ನೋಡಿ ಗುರುತಿಸಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಎ ಪಿ ಪಿ ಕಾಲವಕಾಶ ಕೇಳಲಾಗಿ ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ